(ಇಂದು ದಿನಾಂಕಃ 11-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ 4 ಪರ ಶ್ರೀ. ಜೆ.ಪಿ.ಎ ವಕೀಲರಿಂದ ಃ**

1. ನನಗೆ ಹಿಂದಿ ಭಾಷೆ ಓದಲು ಸ್ವಲ್ಪ ಬರುತ್ತದೆ ಮತ್ತು ಲಂಬಾಣಿ ಭಾಷೆ ಬರುತ್ತದೆ. ಈ ದಾವೆಯನ್ನು ನಾನು ಯಾಕೆ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ಫಾರಂ ನಂಬರ 10 ಆಗಿದ್ದು, ಸ್ವಾಧೀನದಲ್ಲಿ ನಾನು ಇದ್ದುದ್ದರಿಂದ ಈ ದಾವೆಯನ್ನು ನಾನು ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ಈಗ ಹೊಲ ಇದೆಯಾ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ಹೊಲ ಸರಕಾರಕ್ಕೆ ಮುಳುಗಡೆ ಆಗಿದೆ ಎಂದರೆ ಸರಿ. ಹೊಲ ಸರಕಾರಕ್ಕೆ ಮುಳುಗಡೆ ಆದ ಸಮಯದಲ್ಲಿ ನನ್ನ ತಂದೆ ಬದುಕಿದ್ದರು ಎಂದರೆ ಸರಿ. ಹೊಲ ಸರಕಾರಕ್ಕೆ ಮುಳುಗಡೆ ಆಗಿ ಅಂದಾಜು 30 ವರ್ಷ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.  ಹೊಲ ಸರಕಾರಕ್ಕೆ ಮುಳುಗಡೆ ಆದ ನಂತರ ಅದರ ಪರಿಹಾರದ ಹಣವನ್ನು ರಾಜುನಾಯಕ ಮತ್ತು ಸಹೋದರರು ತೆಗೆದುಕೊಂಡಿರುತ್ತಾರೆ ಎಂದರೆ

ನನಗೆ ಗೊತ್ತಿಲ್ಲ. ಪರಿಹಾರದ ಹಣ ಬಂದಾಗ ನನ್ನ ತಂದೆ ಬದುಕಿದ್ದರು ಎಂದರೆ ಸರಿ. ನನ್ನ ತಂದೆ ಮತ್ತು ಶಂಕರ ಬೇರೆ ಬೇರೆ ಇರುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಆಸ್ತಿಗಳನ್ನು ಹಂಚಿಕೊಂಡಿದ್ದರು ಎಂದು ಹೇಳುತ್ತಾರೆ. ನನ್ನ ತಂದೆ ಬದುಕಿದ್ದಾಗ ಸದರಿ ಹೊಲ ಶಂಕರರವರ ಹೆಸರಿಗೆ ಮ್ಯುಟೇಷನ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಶಂಕರರವರ ಹೆಸರಿಗೆ ಮ್ಯುಟೇಷನ ಆಗಿದ್ದು ಅದನ್ನು ನನ್ನ ತಂದೆ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪರಿಹಾರದ ಹಣದ ಬಗ್ಗೆ ಶಂಕರವರು ಹಾಗೂ ರಾಜು ಮತ್ತು ಅವರ ಸಹೋದರರ ನಡುವೆ ಊರಲ್ಲಿ ಒಂದು ಪಂಚಾಯಿತಿ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡು 7-8 ವರ್ಷ ಆಗಿರುತ್ತದೆ. 2017 ರಲ್ಲಿ ನನ್ನ ತಂದೆ ಬದುಕಿದ್ದರೊ ಇಲ್ಲೆ ಎಂದು ನನಗೆ ಗೊತ್ತಿಲ್ಲ. ಪಂಚಾಯಿತಿಯಲ್ಲಿ ಹೊಲ ಶಂಕರವರದ್ದಾಗಿದ್ದು ಪರಿಹಾರದ ಹಣ ಶಂಕರವರಿಗೆ ಕೊಡಬೇಕು ಎಂದು ತೀರ್ಮಾನ ಆಯಿತು ಎಂದರೆ ನನಗೆ ಗೊತ್ತಿಲ್ಲ. ಪಂಚಾಯಿತಿಯಲ್ಲಿ ರಾಜುರವರು ಸದರಿ ಹೊಲ ಶಂಕರವರದ್ದಾಗಿದ್ದು ಪರಿಹಾರದ ಹಣ ಶಂಕರವರಿಗೆ ಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಹಣ ಕೊಡದೆ ಇದ್ದುದ್ದರಿಂದ ಶಂಕರವರು ರಾಜುರವರ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವೆ ಸಲ್ಲಿಸಿದ ನಂತರ ಮತ್ತೆ ಊರಲ್ಲಿ ಪಂಚಾಯಿತಿ ಮಾಡಲಾಗಿದ್ದು ಅದರಂತೆ ದಿಃ 07-09-2016 ರಂದು ನ್ಯಾಯಾಲಯದಲ್ಲಿ ಅಸಲು ದಾವೆ ರಾಜಿ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ ಶಂಕರವರವರು ವಿಭಾಗ ಮಾಡಿಕೊಂಡ ನಂತರ ಸದರಿ ಹೊಲ ಶಂಕರವರರಿಗೆ ಹೋಗಿತ್ತು ಎಂದರೆ ಸಾಕ್ಷಿ ಇಬ್ಬರಿಗು ಬಂದಿತ್ತು ಎಂದು ಹೇಳುತ್ತಾರೆ. ಸಾಕ್ಷಿ

ಮುಂದುವರೆದು ಅವರಿಗೆ ಹೋಗಿತ್ತು ಎಂದು ಹೇಳುತ್ತಾರೆ. ದಿಃ 07-09-2016 ರಂದು ನ್ಯಾಯಾಲಯದಲ್ಲಿ ಅಸಲು ದಾವೆ ರಾಜಿ ಮಾಡಿಕೊಂಡ ಬಗ್ಗೆ ನನಗೆ ಹಾಗೂ ನನ್ನ ಅಣ್ಣ ತಮ್ಮಂದಿರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಈ ಜಮೀನಿನ ಬಗ್ಗೆ ಮತ್ತು ಪರಿಹಾರದ ಹಣ ನನಗೆ ಬೇಕು ಎಂದು ನಾನು ಶಂಕರವರಿಗೆ ಕೇಳಿಲ್ಲ. ಈ ದಾವಾ ಆಸ್ತಿ ನನಗೆ ಸಂಬಂಧ ಪಟ್ಟದ್ದು ಅಲ್ಲ ಆದ್ದರಿಂದ ಈ ಜಮೀನಿನ ಬಗ್ಗೆ ಮತ್ತು ಪರಿಹಾರದ ಹಣ ನನಗೆ ಬೇಕು ಎಂದು ನಾನು ಶಂಕರವರಿಗೆ ಕೇಳಿಲ್ಲ ಎಂದರೆ ಸರಿ. ನನ್ನ ತಾಯಿ ಬದುಕಿದ್ದಾರೆ. ಸದರಿ ಜಮೀನು ಶಂಕರವರ ಜಮೀನು ಇದೆ ಈ ದಾವೆ ಸಲ್ಲಿಸಬೇಡ ಎಂದು ನನ್ನ ತಾಯಿ ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನನ್ನ ತಾಯಿ ಪಕ್ಷಗಾರರಲ್ಲ ಎಂದರೆ ಸರಿ. ಪರಿಹಾರದ ಹಣ ಶಂಕರವರಿಗೆ ಕೊಡಬಾರದು ಎಂಬ ಉದ್ದೇಶದಿಂದ ನಾವು 3 ಜನ ಅಣ್ಣ-ತಮ್ಮಂದಿರು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಜಮೀನು ಮತ್ತು ಪರಿಹಾರದ ಹಣ ಶಂಕರವರಿಗೆ ಸೇರಬೇಕಾದ ಹಣ ಎಂದರೆ ಸಾಕ್ಷಿ ನಾವು ಎಲ್ಲಿಗೆ ಹೋಗಬೇಕು ಎಂದು ಕೇಳುತ್ತಾರೆ. ಸದರಿ ಶಂಕರವರ ಜಮೀನು ಇದೆ ಎಂದು ಗೊತ್ತಿದ್ದರಿಂದ ನನ್ನ ತಂದೆ ಪರಿಹಾರದ ಹಣದ ಬಗ್ಗೆ ಯಾವುದೇ ಪ್ರಶ್ನೇ ಮಾಡಿಲ್ಲ ಎಂದರೆ ಸರಿಯಲ್ಲ. ಈಗ ಪರಿಹಾರದ ಹಣ ಹೆಚ್ಚಿಗೆ ಬಂದಿದ್ದರಿಂದ ಶಂಕರವರಿಗೆ ಕೊಡಬಾರದು ಎಂಬ ಉದ್ದೇಶದಿಂದ ನಾವು 3 ಜನ ಅಣ್ಣ-ತಮ್ಮಂದಿರು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ 1 ರಿಂದ 3 ರವರಿಗೆ ಪರಿಹಾರದ ಹಣಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.